**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 4695/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಶಿವು** | ಪ್ರಾಸಾಃ 2 |
| ತಂದೆಯ/ಗಂಡನ ಹೆಸರು | | ಮಾದಪ್ಪ | ಚಾಸಾಃ 3 |
| ವಯಸ್ಸು | | 32 ವರ್ಷ | |
| ಕೆಲಸ | | ಆಟೋ ಚಾಲಕ | ಸಾ ಪ್ರ ಬೋ |
| ವಾಸ | | ಬಿಳಿಗೆರೆ ಗ್ರಾಮ | ದಿಃ 08/08/2023 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ಸ್ಥಳ ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಬರೆದಂತಹ ವಿಚಾರಗಳು ನನಗೆ ಗೊತ್ತಿಲ್ಲ. ಸುಮಾರು 1 ವರ್ಷಗಳ ಹಿಂದೆ ಬಿಳಿಗೆರೆ ಪೊಲೀಸ್ ಠಾಣೆಗೆ ಯಾವುದೋ ವಿಚಾರಕ್ಕೆ ಹೋದಾಗ ಪೊಲೀಸ್ ಠಾಣೆಯಲ್ಲಿ ನಿಪಿ-1 ಕ್ಕೆ ನನ್ನ ರುಜು ಪಡೆದಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ಮದ್ಯ ವನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಆರೋಪಿಯನ್ನು ನಾನು ಈ ಹಿಂದೆ ನೋಡಿಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 90 ಎಂ.ಎಲ್. ನ 25 ಹೈವರ್ಡ್ಸ್ ಚೀರ್ಸ್ ವಿಸ್ಕಿ ಪೌಚುಗಳು, 90 ಎಂ.ಎಲ್. ನ 10 ವಿಂಡ್ಸರ್ ಡಿಲಕ್ಸ್ ವಿಸ್ಕಿ ಯ ಪೌಚುಗಳು ಮತ್ತು ಒಂದು ಪ್ಲಾಸ್ಟಿಕ್ ಬ್ಯಾಗ್ ಅನ್ನು ನೋಡಿ ಗುರುತಿಸಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ.ಯವರಿಂದಃ**

ದಿನಾಂಕ 17.04.2022 ರಂದು ಮರಡಿಹುಂಡಿ ಗ್ರಾಮದ ಸಮುದಾಯ ಭವನದ ಪಕ್ಕದಲ್ಲಿ ಆರೋಪಿಯು ಮದ್ಯವನ್ನು ಅಕ್ರಮವಾಗಿ ಯಾವುದೇ ರಹದಾರಿ ಇಲ್ಲದೆ ತನ್ನ ಸ್ವಾಧೀನದಲ್ಲಿ ಹೊಂದಿ ಮಾರಾಟ ಮಾಡುತ್ತಿದ್ದಾನೆ ಎಂದು ಪೋಲೀಸರಿಗೆ ಬಂದ ಮಾಹಿತಿ ಮೇರೆಗೆ ಅವರುಗಳು ಪಂಚರಾಗಿ ನನ್ನನ್ನು ಮತ್ತು ಚಾಸಾ-2 ರವರನ್ನು ಕರೆದುಕೊಂಡು ಹೋಗಿ ದಾಳಿ ಮಾಡಿದಾಗ ಆರೋಪಿಯು ಪೊಲೀಸರನ್ನು ನೋಡಿ ತನ್ನ ವಶದಲ್ಲಿ ಇದ್ದ ಪ್ಲಾಸ್ಟಿಕ್ ಚೀಲವನ್ನು ಬಿಟ್ಟು ಓಡಿ ಹೋಗಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿಯು ಬಿಟ್ಟು ಹೋದ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ.ಎಲ್. ನ 25 ಹೈವರ್ಡ್ಸ್ ಚೀರ್ಸ್ ವಿಸ್ಕಿ ಪೌಚುಗಳು, 90 ಎಂ.ಎಲ್. ನ 10 ವಿಂಡ್ಸರ್ ಡಿಲಕ್ಸ್ ವಿಸ್ಕಿ ಯ ಪೌಚುಗಳು ಇದ್ದು ಅವುಗಳನ್ನು ರಾತ್ರಿ 00.00 ರಿಂದ ದಿನಾಂಕ 18.04.2022 ರ ಬೆಳಗಿನ ಜಾವ 1.30 ಗಂಟೆಯವರೆಗೆ ಪಂಚನಾಮೆ ಬರೆದು ನನ್ನ ಹಾಗು ಚಾಸಾ-2 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ನೋಡಿದ್ದು ಈ ಪ್ರಕರಣದ ಬಗ್ಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ವಶಪಡಿಸಿಕೊಂಡ ಮದ್ಯವನ್ನು ಇಂಗ್ಲೀಷ್ ನ ಆರ್ ಎಂಬ ಅಕ್ಷರದಿಂದ ಅರಗಿನಿಂದ ಸೀಲು ಮಾಡಿ ನಮ್ಮಗಳ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ. ಇದೇ ವಿಚಾರವಾಗಿ ದಿನಾಂಕ 18.04.2022 ರಂದು ಈಗ ನನಗೆ ಓದಿ ಹೇಳಿದಂತೆ "ದಿನಾಂಕ 17.04.2022 ರಂದು - - - - -ನಾನು ಸಹಿ ಮಾಡಿರುತ್ತೇನೆ " ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ನನಗೆ ನಿಪಿ-1 ಮತ್ತು 3 ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ ಇಲ್ಲ ಎಂದು ತಿಳಿಸಿರುತ್ತಾರೆ.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**